(SRI A. G. RAMACHANDRA RAO).

| | Name of School | Amount of rent per mensem Rs. | Amount of rent per annum Rs. |
|---|---|---|---|
| Tumkur Taluk.— | | | |
| 1 | Urdu Primary Boys' School, Davood Sabarapalya. | 3 | 36 |
| 2 | Urdu Primary Boys' School, Hebbur. | 5 | 60 |
| 3 | Urdu Primary Boys' School. Ganganahalli. | 1 | 12 |
| 4 | Basic Primary School, Gulur. | 15 | 180 |
| | Total .. | 24 | 288 |

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ಟೌನಿನಲ್ಲಿರುವ ಪ್ರೈಮರಿ ಸ್ಕೂಲುಗಳೆಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ ಎಚ್. ಮೂಡಲಗಿರಿಗೌಡ.—ಮಿಡ್ಲ್ ಸ್ಕೂಲುಗಳೆಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ತಾಲ್ಲೂಕು ಪ್ರದೇಶದಲ್ಲಿರತಕ್ಕ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳೆಷ್ಟು?

Sri A. G. RAMACHANDRA RAO.—These questions do not arise.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇಲ್ಲಿ ಹೊರ ಪೇಜೆ ಮತ್ತು ಪೇಜೆ ಎಂದು ಕೊಟ್ಟಿದ್ದೀರಲ್ಲ, ಅಲ್ಲಿರುವ ಸ್ಕೂಲುಗಳಲ್ಲಿ ಎಷ್ಟೆಷ್ಟು ಜನ ವಿದ್ಯಾರ್ಥಿಗಳಿದ್ದಾರೆ?

Sri A. G. RAMACHANDRA RAO.—Even that does not arise here.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಲ್ಲಿ ಎಷ್ಟು ತರಗತಿಗಳಿವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಎಚ್ ಮೂಡಲಗಿರಿಗೌಡ.—ಇಷ್ಟು ಹೆಚ್ಚಿಗೆ ವ್ಯರ್ಥಾ ಬಾಡಿಗೆ ಕೊಡುತ್ತಿದ್ದೀರಲ್ಲ ಎಂಬುದನ್ನು ತಿಳಿಸುವುದಕ್ಕಾಗಿ ಕೇಳುತ್ತಿದ್ದೇನೆ. ಈ ಟೌನಿನಲ್ಲಿ ಈ ಸ್ಕೂಲುಗಳನ್ನು ಮಂಜೂರು ಮಾಡುವಾಗ ಕಟ್ಟಡಗಳನ್ನು ಕಟ್ಟಿಸಿ ಕೊಡುವುದಕ್ಕಾಗಿ ಎಂದು ಮುನಿಸಿಪಾಲಟಿಯವರು ಏನಾದರೂ ಕೊಟ್ಟಿದ್ದರೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರಿ ಕಟ್ಟಡ ಕಟ್ಟುವವರೆಗೂ ಸ್ಕೂಲಿಗೆ ತೊಂದರೆಯಾಗುತ್ತದೆಂದು ಬಾಡಿಗೆಗೆ ಒಂದು ಕಟ್ಟಡ ತೆಗೆದುಕೊಂಡು ಅದಕ್ಕೆ ಕೋಟ್ಟಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದೇ ನೀತಿಯನ್ನು ಹಳ್ಳಿಗಳ ಕಡೆಯೂ ಅನುಸರಿಸಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಾದ ಮಟ್ಟಿಗೂ ಅನುಸರಿಸಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಳ್ಳಿಗಳ ಕಡೆ ಈರೀತಿ ಬಾಡಿಗೆಗೆ ಮನೆಗಳು ಸಿಕ್ಕುವುದಿಲ್ಲವೆಂದು ತಿಳಿದಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಾಡಿಗೆಗೆ ತೆಗೆದುಕೊಂಡಿರುವುದನ್ನು ಉತ್ತರದಲ್ಲೇ ಹೇಳಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಳ್ಳಿಗಳ ಕಡೆ ಬಾಡಿಗೆ ಮನೆಗಳಲ್ಲಿ ಸ್ಕೂಲು ನಡೆಸುತ್ತೇವೆಂದರೂ ಒಪ್ಪದೆ ಕಟ್ಟಡ ಕಟ್ಟಿಸಿಕೊಟ್ಟರೆ ಮಾತ್ರವೇ ಸ್ಕೂಲು ಕೊಡುತ್ತೇವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಬಾಡಿಗೆ ತೆಗೆದು ಕೊಂಡಿರುವ ಕಟ್ಟಡಗಳು ಏನೂ ಅಪಾಯಕರವಾಗಿಲ್ಲದೆ ಅಲ್ಲಿ ಹುಡುಗರು ವಿದ್ಯಾಭ್ಯಾಸ ಮಾಡಬಹುದೆ ಎಂಬ ಬಗ್ಗೆ ಅವುಗಳ ಸ್ಥಿತಿ ಗತಿಗಳನ್ನು ಪರಿಶೀಲನೆ ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಪಾಯ ವಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅಲ್ಲಿ ಕೆಲವು ಕಟ್ಟಡಗಳು ಅಪಾಯ ಸ್ಥಿತಿಯಲ್ಲವೆ, ಪರೀಕ್ಷೆ ಮಾಡಿಸುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿಸುತ್ತೇವೆ.

---

*Amenities to Swathanthrapalya, Bangalore.*

*Q.*—508. Sri V. R. NAIDU (Malleswaram):—

Will the Government be pleased to state:—

(*a*) whether the Swathanthra Palya near Sriramapuram in Bangalore belongs to the Revenue Department or to the Municipality;

(*b*) the number of huts and the number of inhabitants in that Palya;

(*c*) whether they are aware of the difficulty experienced by those people in the matter of getting water and electricity;

(*d*) if so, what are the steps taken to provide them immediately with water, lighting and housing facilities?

*A.*—Sri T. CHANNIAH (Minister for Public Health and Local Self-Government).—

(*a*) The area was acquired by the Land Acquisition Officer on behalf of the Maharaja Mills for housing the Mill Labourers. The extent is 13 acres and 32 guntas. The Mill Authorities have paid Rs. 25,233-14-0 for the acquisition. There were about 80 to 90 huts while possession was taken. The Mill Authorities appeared to have refused to take possession of the land unless vacant

possession was given to them. In the meanwhile, on account of the communal disturbances in 1947, a large number of huts sprang up, and people started occupying the land unauthorisedly. The entire area is now full of huts.

(*b*) Number of huts .. 1,200
Number of inhabitants about. 6,500

(*c*) As this area has been unauthorisedly built upon, no civic amenities have been provided to this area by the Corporation. A few public lavatories have, however, been provided just at the Corporation boundary bordering this area to enable these residents to use them.

(*d*) Water, lighting and housing facilities cannot be provided to this area at present as this is not a Municipal lay-out and no taxes are also being collected by the Corporation on these huts.

ಶ್ರೀ ವಿ. ಆರ್. ನಾಯ್ಡು.—ಅಲ್ಲಿ ವಾಸಮಾಡುತ್ತಿದ್ದವರಿಂದ ಯಾವಾಗ ಆ ಜಮೀನನ್ನು ಅಕ್ವೈರ್ ಮಾಡಿಕೊಂಡರು ?

ಶ್ರೀ ಟಿ. ಚನ್ನಯ್ಯ.—1937ನೆಯ ಇಸ್ವಿಯಲ್ಲಿ.

ಶ್ರೀ ವಿ. ಆರ್. ನಾಯ್ಡು.—ಇದುವರೆಗೂ ಆ ಜಮೀನನ್ನು ನುಘರ್ಧಿಗೆ ಕೊಟ್ಟಿಲ್ಲ ಅಲ್ಲವೆ ?

ಶ್ರೀ ಟಿ. ಚನ್ನಯ್ಯ.—ಕೊಟ್ಟಿಲ್ಲ.

ಶ್ರೀ ವಿ. ಆರ್. ನಾಯ್ಡು.—ಏಕೆ ಕೊಟ್ಟಿಲ್ಲ ?

ಶ್ರೀ ಟಿ. ಚನ್ನಯ್ಯ.—ಕಾರಣವನ್ನು ಉತ್ತರದಲ್ಲೇ ತಿಳಿಸಿದೆ.

ಶ್ರೀ ವಿ. ಆರ್. ನಾಯ್ಡು.—ಅಲ್ಲಿ ಈಗ ವಾಸಮಾಡುವವರಾರು ?

ಶ್ರೀ ಟಿ. ಚನ್ನಯ್ಯ.—ಬಹುಮಂದಿ ಮಿಲ್ಲಿನಲ್ಲಿ ಕೆಲಸ ಮಾಡುವವರು ಮತ್ತು ಕೂಲಿಗಾರರು.

ಶ್ರೀ ವಿ. ಆರ್. ನಾಯ್ಡು.—ಅವರಿಗೆ ಅನುಕೂಲ ಮಾಡುವ ಉದ್ದೇಶದಿಂದಲ್ಲವೆ ಅದನ್ನು ಅಕ್ವೈರ್ ಮಾಡಿರುವುದು ?

ಶ್ರೀ ಟಿ. ಚನ್ನಯ್ಯ.—ರಾಜಾಮಿಲ್ ಕೂಲಿಗಾರರಿಗಾಗಿ ಅಕ್ವೈರ್ ಮಾಡಿಕೊಂಡಿರುವುದು.

ಶ್ರೀ ವಿ. ಆರ್. ನಾಯ್ಡು.—ಅಲ್ಲಿ ವಾಸಮಾಡುವವರು ಕಾರ್ಮಿಕರಲ್ಲವೆ ?

ಶ್ರೀ ಟಿ. ಚನ್ನಯ್ಯ.—ಬಹುಮಂದಿ ಕೂಲಿಗಾರರಾದರೂ ಅಕ್ವೈರ್ ಮಾಡಿದ ಉದ್ದೇಶ ರಾಜಾಮಿಲ್ ಕೂಲಿಗಾರರಿಗೆಂದು.

ಶ್ರೀ ವಿ. ಆರ್. ನಾಯ್ಡು.—ಅಕ್ವೈರ್ ಮಾಡಿದ್ದಾರೋ ಇಲ್ಲವೋ ಎಂಬ ಬಗ್ಗೆ ವ್ಯವಹಾರ ನಡೆದಿದೆಯೆ ?

ಶ್ರೀ ಟಿ. ಚನ್ನಯ್ಯ.—ನಡೆದಿದೆ.

ಶ್ರೀ ವಿ. ಆರ್. ನಾಯ್ಡು.—1,200 ಗುಡಿಸಲುಗಳಿವೆಯೆಂದು ಹೇಳಿದ್ದೀರಿ, ತಾವು ಅಲ್ಲಿಗೆ ಭೇಟಿ ಕೊಟ್ಟಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ವಿ. ಆರ್. ನಾಯ್ಡು.—ಅಲ್ಲಿರ ಪುದು ಗೂಡುಗಳೋ ಗುಡಿಸಲುಗಳೊ ?

ಅಧ್ಯಕ್ಷರು.—ಅದು ಸರಿಯಾದ ಪ್ರಶ್ನೆಯಲ್ಲ; ಬೇರೆ ಪ್ರಶ್ನೆಯಿದ್ದರೆ ಕೇಳಿ.

ಶ್ರೀ ವಿ. ಆರ್. ನಾಯ್ಡು.—ಹಿಂದಿದ್ದ ಮಂತ್ರಿಗಳು ಭೇಟಿಕೊಟ್ಟಿದ್ದರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಅದು ಗೊತ್ತಿಲ್ಲ. ನಾನು ಅಲ್ಲಿಗೆ ಹೋಗಿ ನೋಡಿದ್ದೇನೆ.

ಶ್ರೀ ವಿ. ಆರ್. ನಾಯ್ಡು.—ತಾವು ಹೋದ ಮೇಲೆ ಯಾವ ಕಾರ್ಯಕ್ರಮ ಕೈಗೆದುಕೊಂಡಿರಿ ?

ಶ್ರೀ ಟಿ. ಚನ್ನಯ್ಯ.—ಪೊಸೆಷ್ ಕೊಡುವ ವಿಷಯದಲ್ಲಿ ಮಿಲ್ಲಿನವರು ಕೋರ್ಟಿನಲ್ಲಿ ದಾವಾ ಹಾಕಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಅಲ್ಲಿ ವಾಸಮಾಡುತ್ತಿರುವವರು ಕೆಲವು ತಿಂಗಳುಗಳಿಂದ ಬಹಳ ಕಪ್ಪ ಕೊಟ್ಟಿಕ್ಕಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಕೂಲಿಗಾರರು ಕಷ್ಟದಲ್ಲಿದ್ದಾರೆಂಬ ವಿಷಯ ಮಾನ್ಯ ಸದಸ್ಯರಿಗೂ ಗೊತ್ತಿದೆ.

ಶ್ರೀ ವಿ. ಆರ್. ನಾಯ್ಡು.—ಕೂಲಿಗಾರರ ವಿಷಯದಲ್ಲಿ ಹೆಚ್ಚುಗಮನ ಕೊಡಬೇಕಾದುದು ಸರ್ಕಾರದ ಕರ್ತವ್ಯವಲ್ಲವೆ ?

ಶ್ರೀ ಟಿ. ಚನ್ನಯ್ಯ.—ಖಂಡಿತವಾಗಿ ಕೊಡುತ್ತಿದ್ದೇವೆ, ಮುಂದೆಯೂ ಕೊಡುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಈಗ ನೀರು, ದೀಪ, ವಸತಿಯಿಲ್ಲದೆ ರಾಮಚಂದ್ರಪುರದ ಹತ್ತಿರ 20 ಮಂದಿ ಕಾಲರಾದಿಂದ ಸತ್ತರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಈಗ ಅಕ್ವೈರ್ ಮಾಡಿರುವ ಜಮೀನಿನ ವಿಷಯ ಪ್ರಸಕ್ತವಾದುದು. ಅದರ ಸಮೀಪದಲ್ಲಿಯೇ ಲ್ಯಾಟೆರಿಗಳನ್ನು ಕಾರ್ಪೊರೇಷನವರು ಕಟ್ಟಿಸಿ ಅನುಕೂಲ ಮಾಡಿದ್ದಾರೆ. ಆದರೆ ನೀರು ಮತ್ತು ದೀಪದ ವ್ಯವಸ್ಥೆಯನ್ನು ಮಾಡಿಲ್ಲ.

ಶ್ರೀ ವಿ. ಆರ್. ನಾಯ್ಡು.—ಮುಂದಾದರೂ ಸರ್ಕಾರ ಅಥವಾ ಕಾರ್ಪೊರೇಷನ್ನಿನವರು ಕಾರ್ಯಕ್ರಮ ಕೈಕೊಂಡು ಜಾಗ್ರತೆ ಕೆಲಸ ಮಾಡಬೇಕೆಂದು ಕೇಳುತ್ತಿದ್ದೇನೆ, ಇದಕ್ಕೆ ತಮ್ಮ ಅಭಿಪ್ರಾಯವೇನು ?

ಶ್ರೀ ಟಿ. ಚನ್ನಯ್ಯ.—ಆಲೋಚನೆ ಮಾಡುತ್ತಿದ್ದೇವೆ.

Mr. SPEAKER.—That is a matter which requires examination.

Sri R. ANANTARAMAN.—Sir, are Government aware that most of the inhabitants are employees of the Raja Mills ?

Sri T. CHANNIAH.—May be Sir.

Sri R. ANANTARAMAN.—Is it not the duty of the Raja Mills to put up small houses for them ?

Sri T. CHANNIAH.—Yes Sir. But, since possession of the land has not yet been given to the mill-owners, they cannot build any houses.

Sri R. ANANTARAMAN.—Are Government aware that symbolic possession of the land has been given to them, but they have refused to take possession of the same because 80 to 90 huts were on the land?

Sri T. CHANNIAH.—That answer has already been furnished.

Mr. SPEAKER.—The answer is very clear.

Sri R. ANANTARAMAN.—Will Government take steps to see that the mill-owners provide all facilities to their employees?

Sri T. CHANNIAH.—We will take every possible action in the matter.

ಶ್ರೀ ಕೆ. ಎ. ಬೈರೇಗೌಡ.—(ಡಿ) ಭಾಗದ ಉತ್ತರದಲ್ಲಿ ಮ್ಯುನಿಸಿಪಲ್ ಲೇಔಟ್ ಇಲ್ಲದೇಯಿರುವುದರಿಂದ ನೀರು ದೀಪ ಬಂದಿಲ್ಲವೆಂದು ಹೇಳಿದೆ. ಮುನಿಸಿಪಾಲಿಟಿಯವರು ಮೊನ್ನೆತಾನ್ನೆ ಆದ ಹರಾಜಿನಲ್ಲಿ ಆ ಪ್ರದೇಶದಲ್ಲಿದ್ದ ಗೊಬ್ಬರವನ್ನು ಹರಾಜು ಮಾಡಲಲ್ಲವೆ?

ಶ್ರೀ ಟಿ. ಚನ್ನಯ್ಯ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎ. ಬೈರೇಗೌಡ.—ಅಲ್ಲಿ ಕಾರ್ಪೊರೇಷನ್ ಪ್ರದೇಶದಲ್ಲಿಯೂ ರೆವೆನ್ಯೂ ಜಮೀನಿನಲ್ಲಿಯೂ ಬೇಕಾದಷ್ಟು unauthorised constructions ಆಗಿವೆ. ಇದರ ವಿಷಯ ಯೋಚನೆಮಾಡಿದ್ದೀರಾ?

Mr. SPEAKER.—That is a matter which requires examination.....

Sri T. CHANNIAH.—Both by the Revenue and Corporation authorities.

ಶ್ರೀ ಕೆ. ಪ್ರಭಾಕರ್.—ಆ ಪಾಳ್ಯದಲ್ಲರುವವರು ಮಿಲ್ಲಿನವರೇ ಅಲ್ಲದೆ, ಅಲ್ಲ ಬೇರೆಯವರೂ ಇದ್ದಾರೆಂದು ಗೊತ್ತಿದೆ. ಒಂದುವೇಳೆ ಮಿಲ್ಲಿನವರಿಗೆ ಬೇರೆ ಕಟ್ಟಿದ ಮೇಲೆ ಅಲ್ಲರುವ ಬಾಕಿ ಜನರಿಗೆ ಏನು ಏರ್ಪಾಡು ಮಾಡಲು ಯೋಚನೆ ಮಾಡಿದ್ದೀರಿ?

Sri T. CHANNIAH.—It is a hypothetical question, Sir.

Mr. SPEAKER.—Next question.

(Addressing Sri M. Madiah who was standing.)

The answers are so clear. It is stated that the possession of the land has not been taken by the mill authorities. It requires legal examination.

---

**Repairs of the road from Halagur to Channapatna.**

*Q.*—219. Sri M. CHIKKALINGAIAH (Malavalli-Scheduled Castes).—

Will the Government be pleased to state:—

(a) whether it is not a fact that there is a road running from Halagur (Malavalli Taluk) to Channapatna *via* Konnapura, Lingapatna and Kuntoor villages;

(b) the estimated cost of the road and when the estimate was sanctioned;

(c) who are the contractors entrusted with the work of the repairs of this road;

(d) the stage at which the work is and the amount spent therefor upto-date?

*A.*—KADIDAL MANJAPPA (Minister for Revenue and Public Works).—

(a) Yes.

(b) The estimated cost of the road is not known. An estimate for Rs. 20,000 for improving the road was sanctioned in September 1947.

(c) Work taken up on piece-work system.

(d) An expenditure of Rs. 7,724 only was incurred to end of 1949 on work done by the piece-workers. Further work was stayed for want of land acquisition. A revised estimate for Rs. 28,000 for the balance of work to be done is under consideration.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹೋದ ಅಕ್ಟೋಬರ್ ಅಧಿವೇಶನದಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ಈ ರಸ್ತೆ ಇಲ್ಲವೆಂದು ಹೇಳಿದ್ದೀರಿ, ಈಗ ಇದೆ ಎಂದು ಹೇಳಿದ್ದೀರಿ, ಯಾವುದು ನಿಜ?

ಶ್ರೀ ಕಡಿದಾಳ್ ಮಂಜಪ್ಪ.—ಅಕ್ಟೋಬರ್ ಅಧಿವೇಶನದಲ್ಲಿ ರಸ್ತೆಯಿಲ್ಲವೆಂದು ಹೇಳಿರುವುದು ನನಗೆ ಗೊತ್ತಿಲ್ಲ, ಅಲ್ಲಂತೂ ರಸ್ತೆಯಿದೆ.

(ಸದಸ್ಯರು ಒಂದು ಕಾಗದವನ್ನು ಮಂತ್ರಿಗಳ ಕೈಗೆ ಕೊಟ್ಟರು, ಅದನ್ನು ಅವರು ನೋಡಿ) ಇದರಲ್ಲ ಹಲಗೂರು ಎಂದಿದೆ, ಅದು ತಪ್ಪಿರಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ರಸ್ತೆಯಿದೆ ಎಂದ ಮೇಲೆ ಅದು ಎಷ್ಟು ಉದ್ದವಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ.